5. ಶೇವಣಿ ಯಿಜದೆ ಯಿದ್ದರೆ ಅಥವಾ ಜಾಮೀನು ಕೊಡದೇ ಯಿದ್ದಲ್ಲಿ ದರಖಾಸ್ತುದಾರನಿಗೆ ಲುಕ್ಸಾನು ಕರವಾಗಿ ಕಂಟ್ರಾಕ್ಟು ಯರಪನೇ ಹರಾಜು ಮಾಡಲ್ಪಡುವದು ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಯಾದ ಮೊಬಲಗಿಗೆ ಪಾವತೀ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವಂದು ಕಾಯಿದೆಯಂತೆ ಬಡ್ಡೀ ವಸೂಲ್ ಮಾಡಲ್ಪಡುವದು, ಮತ್ತು ಡೆಪ್ಯೂಟೀ ಕಮ್ಮಿಷನರವರು ತಮ್ಮಿಗೆ ಯುಕ್ತತೋರುವ ಪ್ರಕಾರ ಅಥವಾ ಜಾಮೀನುದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ಯರಪನೇ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಆದರಿಂದ ಯೀನಾದರೂ ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನುದಾರನಿಂದ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಕಲಮು 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ (1) ವಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲಿ ತೋರಿಸುವ ನಿಜವಾದ ಮತ್ತು ಕರಾರ್ವಾಕ ಲೆಕ್ಕವನ್ನ ಯಿಜಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಪ್ರದ್ಯೋಗಸ್ತರ ಇನ್‌ಸ್ಪೆಕ್ಷನ್‌ಗೆ ಸದರೀ ಲೆಕ್ಕ ವಳಗಾಗಿ ಯಿರತಕ್ಕದ್ದು.

8. ಗವರ್ಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರನು ವುಪಯೋಗಿಸತಕ್ಕದ್ದು, ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟುಕೊಂಡಿರತಕ್ಕದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್ತೇ ತಾರೀಖಿನಲ್ಲಿ ಹಿಂದಿನ ತಿಂಗಳ ಟೋಲ್ ವಸೂಲಿ ಲೆಕ್ಕವನ್ನ ಮುಂಜರಾಬಾದ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

ದರಗಳ ಪಟ್ಟಿ 1852ನೇ ಇಸವಿ ಮಾಚಿದೇ 18ನೇ ಮರ್ತುಂ ಮೈಸೂರು ಗೆಜೆಟ್‌ನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 4ನೇ ಜನವರೀ 1887.

ಇದರಿಂದ ತಿಳಿಸುವದೇನಂದರೆ, ಶಿವಮೊಗ್ಗಾ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟಿರುವ ಖೈದಿಗಳ ವುಪಯೋಗದ ಬಗ್ಗೆ ಸ್ಯ 1887ನೇ ಏಪ್ರೆಲ್ ಗುರ್ತೇ ತಾರೀಖು ಮೊದಲು 1888ನೇ ಮಾರ್ಚೀ 31ನೇ ತಾರೀಖು ವರಿಗೆ ಎರಡು ದಿನಗಳೂ ಶೇರಿ ಜೀಕಾದ ಆಹಾರ ವಗೈರೇ ದರಖಾಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರು ಜೈಲ್‌ಗಳ ಇನ್‌ಸ್ಪೆಕ್ಟರ್ ಜನರಲ್‌ಯವರ ಮಂಜೂರಾತಿಗೆ ವಳಪಟ್ಟು ಸ್ಯ 1887ನೇ ಇಸವಿ ಮಾರ್ಚಿ ವಂದನೇ ತಾರೀಖುವರಿಗೆ ತೆಗದುಕೊಳ್ಳುವರು.

2. ಸದರೀ ಮೇಲ್ಕಂಡ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರದು.

3. "ಶಿವಮೊಗ್ಗಾ ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಗೆ ದರಖಾಸ್ತುಗಳು" ಯಂಬಡಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿಂದ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಶಿವಮೊಗ್ಗಾ ಜೈಲ್ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರಿಂದ ಖುಲ್ಲಾ ಮಾಡಲ್ಪಡುವವು.

6. ದರಖಾಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಒಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು ಯಾವವಂದರೆ:—

					ರೂ.	ಆ.	ಪೈ.
ನೇಟಿವ್ ಕೂಲಿಯವರಾದ ಗಂಡಸರು		A	ಕ್ಲಾಸ್	.. ..			
ಡಿಟೋ	ಡಿಟೋ	B	,,	.. ..			
ಡಿಟೋ	ಡಿಟೋ	C	,,	.. ..			

ಹುಡುಗ ಖೈದೀರು ಡಿಟೋ
ಡಿಟೋ ಕೂಲೀ ಮಾಡದ ಗಂಡಸರು, ಹೆಂಗಸರು,
ಮತ್ತು ವಿಚಾರಣೆಯಲ್ಲಿ ಇರತಕ್ಕವರು D ಕ್ಲಾಸ್
ಯೂರೋಪಿಯರ್ಯಗಳು ವ ಈಸ್ಟ್ ಇಂಡಿಯರ್ಯಗಳು

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸಿಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ, ಅಸಪತ್ರಿ ಪಥ್ಯಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಷ್ಟವಾಗತಕ್ಕ ಪದಾರ್ಥಗಳು, ದೀಪದ ಯಂತ್ರೆ, ಲಾಂ ದ್ರಗಳು, ಮತ್ತು ಅವುಗಳ ರಿಪೇರಿ ಮಾಡಿಸುವಣ, ಸ್ನಾನ ಮಾಡುವ ಬಗ್ಯೆ ೀಗೆಕಾಯಿ, ತಮಾಂ ತಾಂಬ್ರಪಾತ್ರೆಗಳ ರಿಪೇರಿ ವ ಕಲಾ ಯಿ ಮಾಡುವಣ, ಪರಕೆಗಳು, ಗೂಡೆ ವ ಚಾಪೆ ತಯಾರ್ಮಾಡುವ ಬಗ್ಯೆ ಬಿದರು. ಮಡಿಕೆ ಸುಡುವ ಬಗ್ಯೆ ಸಾಡೆ, ಹೆಣ್ಣು ಖೈದೀರ ಮಕ ಳಿಗೆ ಬೇಕಾದ ಹಾಲು, ರೊಟ್ಟಿ, ಸಕ್ಕರೆ ವಗೈರೇ ಪದಾರ್ಥಗಳು, ಹೊಗೆ ಹಾಕುವದಕ್ಕೆ ಗಂಧಕ, ಚವಳುಮಣ್ಣು, ಮತ್ತು ಖೈದಿಗಳಿಗೆ ಕ್ರ ಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟೆೀ ಸಿವಾಯಿ, ತಮಾಂ ಚಿಲ್ಲರೇ ಪದಾರ್ಥಗಳೂ ಸಹ ಅಡಗಿರತಕ್ಕದ್ದು.

8. ಸೂಪರ್ಿಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ, ಡಿಪಾಜಿಟ್ ಮೊಬಲಗು ನಿಲ್ಲಿಸಿಕೊಳ್ಳಲ್ಪಟ್ಟು, ಆತನು ಕಂಟ್ರಾಕ್ಟು ಮುಚ್ಚಲಿಕೆ ಬರೆದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 1,000ರ ರೂಪಾಯಿಗಳ ಮೊಬಲಗಿಗೆ ಜಾವಿಯನನ್ನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಬಂದು ವಾರದ ವಳಗಾಗಿ ಕೊಡಲಿಕ್ಕೆ ತಪ್ಪಿದರೆ, ಸದರೀ ಡಿಪಾ ಜಿಟ್ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರನಿಗೆ ನಗದು ಅಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಶಿವಮೊಗ್ಗಾ ಜೈಲ್ ಸೂಪರ್ಿಟೆಂಡೆಂಟರಿಂದ ಮೊಬಲಗು ಕೊಡ ಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಬಂದು ಖೋಲಿಯು ಬಿಡಲ್ಪಟ್ಟು ಅದರಲ್ಲಿ ಆತನು ನಷ್ಟವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಷ್ಟವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{4}$ ಘಂಟೆಗೆ ಜೈಲ್‌ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕ್ರಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಡುವ ಅಕ್ಕಿ, ರಾಗಿ ಮತ್ತು ಬೇಳೆ ಮುಂತಾದ್ದು ಮಾಡಲ್ಪಟ್ಟು ತವಡುತಲ್ಲ ದೇ ಇರಬೇಕು. ಸರಬರಾಯಿ ಮಾಡುವದಕ್ಕೆ ಮುಂಚಿತವಾಗಿಯೇ ಮೆಣಸಿದಕಾಯಿ ತುಂಬನ್ನೂ ಹುಣಿಸೇಹಣ್ಣಿನ ನಾರು ವ ಬೀಜವೆ ನ್ನೂ ತೆಗದಿರಬೇಕು.

14. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿನಡೆಯುವ ಬಗ್ಯಾಗಲಿ, ಕಿರದು ತರದ ಯಾವ ಪದಾರ್ಥಗಳನ್ನಾದರೂ ಕೊಡುವ ಬಗ್ಯಾಗಲಿ ಶಿವಮೊಗ್ಗಾ ಜೈಲ್ ಸೂಪರ್ಿಟೆಂಡೆಂಟರವರ ಯಖ್ತ್ಯಾರಿಯಿಂದ 50 ರೂಪಾಯಿಗೆ ಮಿರದ ವೊಂದು ಜುರ್ಮಾನೆಯು ಹಾಕಲ್ಪಡುವದು ಬಾರ್‌ಬಾರ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾವಿರ್ನಾ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡಬಹುದು.

15. ಕಂಟ್ರಾಕ್ಟು ತಪ್ಪಿ ನಟೆಯುವ ದರೋಬಸ್ತು ಸಂಗತಿಗಳೊಳಗೂ ಶಿವಮೊಗ್ಗಾ ಜೈಲ್ ಸೂಪರ್ಿಟೆಂಡೆಂಟರವರ ನಿರ್ಣಯ, ವೇ ಆಖೈರಾಗಿರತಕ್ಕದ್ದು.

16. ಕಂಟ್ರಾಕ್ಟುದಾರನು, ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ದರ ಪಾನಿಗೆ 4 ಕಾಸುಗಳ ವೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಇನ್ನೂ ಹೆಚ್ಚಿಗೆ ತಪಶೀಲ್‌ಗಳು ಸೂಪರ್ಿಟೆಂಡೆಂಟರವರನ್ನ ಕೇಳಿ ತಿಳಿದುಕೊಳ್ಳಬಹುದು.

18. ಅಡಿಗೆ ಮಾಡುವಲ್ಲಿ ಮಡಿಕೆ ವಡದು ಹೋಗುವದರಿಂದ ಪದಾರ್ಥವೇನಾದರೂ ಅಕಸ್ಮಾತ್ ನಷ್ಟವಾದರೆ ಅದನ್ನು ಕಂ ಟ್ರಾಕ್ಟುದಾರನೇ ಭರ್ತೀಮಾಡತಕ್ಕದ್ದು.

19. ಹಾಲಿ ಶಿವಮೊಗ್ಗಾ ಜೈಲಿನಲ್ಲಿ 154 ಮಂದಿ ಖೈದೀರಿರುತ್ತಾರೆ ಈ ಸಾಲಿನಲ್ಲಿ ಸುಮಾರು 150 ಮಂದಿವರಿಗೂ ಜಾಸ್ತಿ ಯಾಗಬಹುದು.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮಕ್ಕುಮಿನ ಮೈಸೂರು ಗೆಜೆಟ್‌ನಿಂದಲಾಗಲೀ ಶಿವ ಮೊಗ್ಗಾ ಜೈಲ್ ಸೂಪರ್ಿಟೆಂಡೆಂಟರವರನ್ನ ಕೇಳಿ ಆಗಲೀ ತಿಳಿದುಕೊಳ್ಳಬಹುದು.

ಕೆ. ನಾಗೇಶರಾವ್,
ಶಿವಮೊಗ್ಗಾ ಜೈಲ್ ಸೂಪರ್ಿಟೆಂಡೆಂಟ್,